

ಸಂಪಾದಕೀಯ

# ಎಲ್ಲ ಮೀರುವ ತವಕ

'ಪ್ರಪಂಚ ಚಿಕ್ಕದಾಯಿತು' ಎನ್ನುತ್ತೇವೆ. ಆಧುನಿಕ ಆವಿಷ್ಕಾರಗಳಿಂದಾಗಿ ಮಾನವನಿಗೆ ಸಾವಿರಾರು ಕಿಲೋಮೀಟರ್‌ಗಳನ್ನು ಕೆಲವೇ ಗಂಟೆಗಳಲ್ಲಿ ನೆಗೆಯಬಹುದಾಗಿದೆ. ದೂರದೂರದ ದೇಶಗಳಲ್ಲಿ ನಡೆಯುವ ಘಟನೆಗಳು ಕ್ಷಣಾರ್ಧದಲ್ಲೇ ಎಲ್ಲರ ಅರಿವಿಗೆ ಬರುತ್ತವೆ. ಜಗತ್ತಿನ ಯಾವುದೋ ಮೂಲೆಯಲ್ಲಿ ತಯಾರಾದ ಸಾಮಗ್ರಿಗಳು ನಮ್ಮ ಮನೆಬಾಗಿಲಿಗೇ ಬಂದು ತಲುಪುತ್ತವೆ. ಭೂಗೋಳದ ಯಾವ ಪ್ರದೇಶವೂ ಈಗ ರಹಸ್ಯವಾಗಿ ಉಳಿದಿಲ್ಲ. ಇಷ್ಟಾದರೂ ಮಾನವನ ಒಂದು ಬಯಕೆ ಮಾತ್ರ ಇಂಗಿಹೋಗುವುದಿಲ್ಲ. ಇನ್ನಷ್ಟು ಬೇಕು, ಇನ್ನಷ್ಟು ಹೋಗಬೇಕು, ಇನ್ನಷ್ಟು ವಿಸ್ತಾರವಾಗಬೇಕು... ಹೀಗೆ ವ್ಯಾಪಕಗೊಳ್ಳುವ ಹಂಬಲಕ್ಕೆ ಕೊನೆ ಎಲ್ಲಿ? ಎಲ್ಲಿಂದಾದರೂ ಇದು ಬಂತು? ಎಲ್ಲವನ್ನೂ ತನ್ನದಾಗಿಸಿಕೊಳ್ಳಬೇಕೆಂಬ ಸ್ವಾರ್ಥಬುದ್ಧಿಯೇ ಇದರ ಮೂಲವೆ ? ಅಥವಾ, ಆಂತರ್ಯದಲ್ಲಿ ಅಡಗಿರುವ ಅನಂತದ ಕಲ್ಪನೆಯೇ ಇದಕ್ಕೆ ಪ್ರೇರಕವೆ? ನಾವು ಕಾಲಕಾಲಕ್ಕೆ ಯೋಚಿಸಬೇಕಾದ ವಿಷಯವಿದು.

### ಸೀಮಿತ ನೆಲೆಯ ಬದುಕು

ಈ ಪ್ರಪಂಚದಲ್ಲಿ ಎಲ್ಲವೂ ನಮ್ಮನ್ನು ಒಂದು ಮಿತಿಗೆ ಒಳಪಡಿಸುತ್ತವೆ. ಬದುಕಿನ ಒಂದು ಪರಿಧಿಯನ್ನು ಮೀರಿ ಹೋಗುವುದು ನಮಗೆ ಸಾಧ್ಯವಾಗುವುದಿಲ್ಲ. ಹುಟ್ಟಿ ಬೆಳೆದ ಸಮಾಜ, ಪರಿಸರ, ಕುಟುಂಬ, ಸಂಸ್ಕೃತಿ ಇವುಗಳ ಆಸರೆಯಲ್ಲಿ ನಾವು ಬದುಕುವಷ್ಟು ಕಾಲವೂ ಅವು ನಮ್ಮನ್ನು ಒಂದು ಮಿತಿಗೆ ಒಳಪಡಿಸುತ್ತವೆ. ಯಾವುದೋ ಕಾರಣದಿಂದ, ನೀರಿನಿಂದ ಮೀನನ್ನು ತೆಗೆದು ದೂರ ಎಸೆದಂತೆ, ನಾವು ಬೇರೆಯೇ ಒಂದು ಪರಿಸರಕ್ಕೆ ಹೋಗಬೇಕಾಗಿ ಬಂದಾಗಲೇ ಈ ಮಿತಿ ನಮ್ಮ ಅರಿವಿಗೆ ಬರುತ್ತದೆ. ಉದ್ಯೋಗದ ಕಾರಣದಿಂದ ಅಮೆರಿಕವೋ, ಜರ್ಮನಿಯೋ ಅಥವಾ ಬೇರೆ ಯಾವುದೋ ದೇಶಕ್ಕೆ ಹೋಗಿ ಜೀವಿಸುವರಿಗೆ ಇದು ಅನುಭವಕ್ಕೆ ಬರುತ್ತದೆ. ಆದರೆ ಅಲ್ಲಿನದೂ ಒಂದು ಮಿತಿ; ಅದೂ ಒಂದು ಸೀಮಿತ ಬದುಕು. ಅದಕ್ಕೆ ಒಗ್ಗಿಕೊಳ್ಳುತ್ತ ಅನೇಕ ವರ್ಷ ಕಳೆದಾಗ, ಅವರೂ ಅರ್ಧ ಅಮೆರಿಕನ್ನರೋ, ಜರ್ಮನರೋ ಆಗುತ್ತಾರೆ, ಹಾಗೂ ಅರ್ಧ ಭಾರತೀಯತೆಯನ್ನು ಉಳಿಸಿಕೊಳ್ಳುತ್ತಾರೆ. ಹೀಗೆ ಎಲ್ಲಿಗೆ ಹೋದರೂ, ಎಲ್ಲಿದ್ದರೂ, ಒಂದಲ್ಲ ಒಂದು ಮಿತಿಗೆ ಒಳಪಡಲೇಬೇಕಾಗುತ್ತದೆ. 'ಸಾರ್ವತ್ರಿಕ ಮಾನವ' ಎಂಬುದು ಪ್ರಾಯೋಗಿಕವಾಗಿ ಅಸಾಧ್ಯ ; ಅದು ಆದರ್ಶ, ಕಲ್ಪನೆ ಮಾತ್ರವಾಗುತ್ತದೆ.

ಇನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡೋಣ. ಭೂಮಿ ಎಷ್ಟೇ ವಿಶಾಲವಾಗಿರಲಿ, ಒಂದಲ್ಲ ಒಂದು ಭೂಪ್ರದೇಶದಲ್ಲಿ ಇದ್ದುಕೊಂಡೇ ನಾವು ಬದುಕಬೇಕು. ಇದು 'ದೇಶ'ದ ಮಿತಿ. ಒಂದು ಕಾಲಘಟ್ಟದಲ್ಲಿ , ಕಾಲದ ಪರಿಧಿಯಲ್ಲಿ ನಮ್ಮ ಜೀವನ ನಡೆಯುತ್ತದೆ. ಇದು ಕಾಲದ ಮಿತಿ. ಹೀಗೆ ಕಾಲ-ದೇಶಗಳು ನಮ್ಮ ಪ್ರಪಂಚವನ್ನೂ, ಮಾನವ ಜೀವನವನ್ನೂ ಮಿತಿಗೆ ಒಳಪಡಿಸುತ್ತವೆ. ಇದನ್ನು ವಿಜ್ಞಾನವಾಗಲಿ, ತತ್ತ್ವಶಾಸ್ತ್ರವಾಗಲಿ ಅಲ್ಲಗಳೆಯಲಾಗದು. ಇದರೊಂದಿಗೆ ಮಾನವನ ಆಶೋತ್ತರಗಳು, ಅವನ ಹೋರಾಟ, ಸುಖದುಃಖಗಳು, ಬದುಕಿನಲ್ಲಿ ಕಂಡುಕೊಳ್ಳುವ ವಿಚಾರಗಳು – ಎಲ್ಲವೂ ಬದುಕಿನ ನಿಯಮಗಳಿಗೆ ಅಧೀನವಾಗಿದ್ದುಕೊಂಡೇ ನಡೆಯುತ್ತವೆ. ಅನೇಕ ಬಾರಿ ನಮಗೆ, 'ಮಾನವನಿಗೆ ಸ್ವಾತಂತ್ರ್ಯವೆಂಬುದೇ ಇಲ್ಲ. ಪೂರ್ಣ ಸ್ವಾತಂತ್ರ್ಯವೆಂಬುದು ಕೇವಲ ಕಾಲ್ಪನಿಕ' ಅನ್ನಿಸುತ್ತದೆ. ಒಂದಿಷ್ಟು ಮಿತಿ ಮೀರಿದರೂ ಸಮಾಜ, ಕಾನೂನು, ನೀತಿನಿಯಮಗಳು ನಮ್ಮನ್ನು ತಡೆಯುತ್ತವೆ. ಈ ದೃಷ್ಟಿಯಿಂದ ಮಾನವನು ಕೇವಲ ಸೆರೆಯಾಳು ಎನ್ನಬಹುದಲ್ಲವೆ ?

### ವಿಸ್ತಾರದ ಬಯಕೆ

ಆದರೆ ಇವೆಲ್ಲವನ್ನೂ ಮೀರಿ ಹೋಗುವ, ಎಲ್ಲ ಮಿತಿಗಳನ್ನೂ ದಾಟಿ ವಿಸ್ತಾರಗೊಳ್ಳುವ ತುಡಿತ ಮಾನವನಲ್ಲಿದೆ. ಎಲ್ಲಿ ಘನವಸ್ತು ಪ್ರಪಂಚವು ಮಿತಿಗಳನ್ನು ಒಡ್ಡುವುದೋ, ಜಗತ್ತಿನ ನಿಯಮಗಳು ನಮ್ಮನ್ನು ಕಟ್ಟಿಹಾಕುವುದೋ, ನಮ್ಮದೇ ದೇಹ ಈ ಪ್ರಪಂಚಕ್ಕೆ ನಮ್ಮನ್ನು ಸೆಳೆಯುವುದೋ – ಅದನ್ನು ದಾಟಿ ಹೋಗಲು ಮಾನವನು ನಿರಂತರ ಹೋರಾಡುತ್ತಾನೆ. ಅವನ ಮನಸ್ಸು ಎಲ್ಲ ಎಲ್ಲೆಗಳನ್ನು ಮೀರಿ ಯೋಚಿಸತೊಡಗುತ್ತದೆ. ಸೂರ್ಯ, ಚಂದ್ರ, ನಕ್ಷತ್ರ, ಗ್ರಹಗಳನ್ನೆಲ್ಲ ಮೀರಿ ಅನಂತ ಆಕಾಶದಲ್ಲಿ ವಿಹರಿಸಬಯಸುತ್ತದೆ. ಅಂತೆಯೇ ಅನಂತ ಸಾಗರ

ದಲ್ಲಿ ಕೊನೆಯಿಲ್ಲದೆ ಈಜಾಡುವಂತೆ, ಉನ್ನತೋನ್ನತ ಪರ್ವತಗಳನ್ನು ಒಂದೊಂದಾಗಿ ಏರಿ ಹೋಗುವಂತೆ, ಕಾಲ–ದೇಶ ಬದ್ಧವಾದ ಎಲ್ಲ ಮಿತಿಗಳನ್ನು ಮೀರಿ ಜಿಗಿದಾಡುವಂತೆ ಕಲ್ಪಿಸಿಕೊಳ್ಳುತ್ತದೆ. 'ಇಂದಿನ ಕನಸೇ ನಾಳಿನ ನನಸು' ಎಂಬ ಮಾತಿನಂತೆ, ಅವುಗಳಲ್ಲಿ ಕೆಲವಾದರೂ ಒಂದೊಮ್ಮೆ ನಿಜವಾಗುತ್ತವೆ. ಎಲ್ಲ ಮಹತ್ತರ ಸಾಧನೆಗಳಿಗೆ ಮೂಲ ಪ್ರೇರಕ ಶಕ್ತಿ ಮಾನವನ ಈ ಅದಮ್ಯ ಬಯಕೆ – ಮೀರಿ ಹೋಗುವ ತವಕ. ಅದು ಮೂಡಿ ವಿಕಾಸಗೊಳ್ಳುವುದು ಅವನ ಮನಸ್ಸಿನಲ್ಲಿ. ಅದು ಸಾಕಾರಗೊಳ್ಳುವುದು ಅವನ ಎಡೆಬಿಡದ ಪ್ರಯತ್ನದಲ್ಲಿ. ಈ ಮೀರಿ ಹೋಗುವ ಬಯಕೆಗೆ ಮೂಲವೆಲ್ಲಿ? ಅದು ಮಾನವನಲ್ಲಿ ಮಾತ್ರ ಮೂಡುವುದೇಕೆ? — ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನಾವು ನಮ್ಮ ಇತಿಹಾಸಕ್ಕೇ ಮೊರೆ ಹೊಗಬೇಕು.

### ಪ್ರಾಚೀನ ಧೀರರ ಪ್ರಯತ್ನ

ಉಪನಿಷತ್ತುಗಳ ಕಾಲದಷ್ಟು ಪ್ರಾಚೀನದಲ್ಲೇ ಮಿತಿಗಳನ್ನು ದಾಟಿ ಹೋಗುವ ಪ್ರಯತ್ನ ನಮ್ಮಲ್ಲಿ ಕಂಡುಬಂತು. ಭೌತಿಕ ಜಗತ್ತಿನ ಅನ್ವೇಷಣೆಗಳೆಲ್ಲ ನಡೆದು, ಸೃಷ್ಟಿಯ ರಹಸ್ಯವನ್ನು ಅರಿಯಲು ಅಲ್ಲಿ ಯತ್ನಿಸಿದರು. ಪ್ರಪಂಚದ ಎಲ್ಲ ಶಕ್ತಿಗಳ, ಎಲ್ಲ ನಿಯಮಗಳ ಕೇಂದ್ರವೆಲ್ಲಿ? ಭೂಮಿಯಲ್ಲೆ? ಆಕಾಶದಲ್ಲೆ? ಸೂರ್ಯನಲ್ಲೆ? ಅಥವಾ ಅದರಾಚೆಗೆ ಇದೆಯೆ? ಒಂದು ಹಂತದಲ್ಲಿ ಪುರಾತನ ಋಷಿಗಳಿಗೆ ಗೋಚರವಾಯಿತು – 'ಎಲ್ಲದರ ಕೇಂದ್ರ ನಮ್ಮೊಳಗೆ ಇದೆ. ನಮ್ಮ ಆಂತರ್ಯದಲ್ಲೇ ಎಲ್ಲ ಪ್ರಶ್ನೆಗಳಿಗೆ ಉತ್ತರವಿದೆ.' ತಮ್ಮ ದೃಷ್ಟಿಯನ್ನು ಹೊರಜಗತ್ತಿನಿಂದ ತನ್ನ ಒಳಕ್ಕೆ ತಿರುಗಿಸಿ ನೋಡಿದ: ಅಗಾಧ ಸತ್ಯದ ಪ್ರಪಂಚವೊಂದು ತೆರೆಯಿತು. ಎಲ್ಲ ರಹಸ್ಯವೂ ಇಲ್ಲೇ ಇದೆಯೆಂಬುದು ಅವನಿಗೆ ಅರ್ಥವಾಯಿತು. ಗಾಢ ಧ್ಯಾನ, ಮೌನದಲ್ಲಿ ಮುಳುಗಿದ ಅವನ ದೃಷ್ಟಿಗೆ ಭಗವಂತನ ಅನಂತ ಮಹಿಮೆ ಗೋಚರವಾಯಿತು. ಎಲ್ಲ ಮಿತಿಯಾಚೆಗಿನ, ಎಲ್ಲ ಸೀಮಿತ ಪ್ರಪಂಚಗಳನ್ನು ಮೀರಿದ ಅನಂತ ಸತ್ಯವೊಂದು ಇಲ್ಲಿದೆ; ಇದನ್ನು ಅರಿತರೆ ಇನ್ನು ಅರಿಯಬೇಕಾದದ್ದು ಬೇರೇನೂ ಇಲ್ಲ. ಈ ಸತ್ಯವನ್ನು ಕಂಡಾಗ ನಾವು ಎಲ್ಲವನ್ನೂ ಮೀರಿ ಹೋಗುತ್ತೇವೆ. ಯಾವ ಮಿತಿಯೂ ಇಲ್ಲದ ಈ ಸತ್ಯವನ್ನು ಅರಿತಾಗ ನಾವು ನಿಜವಾದ ಸ್ವಾತಂತ್ರ್ಯ, ಆನಂದ, ಪೂರ್ಣತೆ ಇವನ್ನು ಹೊಂದುತ್ತೇವೆ. ಈ ಸತ್ಯವನ್ನು ವಿವರಿಸಲು ಅವನು 'ಆತ್ಮ', 'ಬ್ರಹ್ಮ', 'ಪುರುಷ' ಮುಂತಾದ ಹೆಸರುಗಳನ್ನು ನೀಡಿದ. ಆದರೆ ಹೆಸರುಗಳಿಂದ ನಿರ್ದೇಶಿಸಬಹುದಾದ ವಸ್ತು ಅದಲ್ಲ; ಆದ್ದರಿಂದ ಅದನ್ನು ಅನುಭವಿಸುವುದು ಮಾತ್ರವೇ ಅದನ್ನು ತಿಳಿಯುವ ಮಾರ್ಗ. ಈ ಮೂಲಕ ಮಾತ್ರವೇ ನಾವು ಎಲ್ಲ ಮಿತಿಗಳನ್ನು ದಾಟಿ ಹೋಗಲು ಸಾಧ್ಯ.

ಈ ಸತ್ಯವನ್ನು ಪ್ರಕಾಶಪಡಿಸಿದ ಋಷಿಗಳನ್ನು 'ಧೀರ' ಎಂದು ಕರೆಯಲಾಗಿದೆ. ನಿಜವಾಗಿ ಈ ಪದದ ಅರ್ಥ ಬುದ್ಧಿವಂತ, ವಿವೇಕಿ ಎಂದು. ಯಾರು ಧೀ- ಅಥವಾ ಬುದ್ಧಿಯ ಮೂಲಕ ಉನ್ನತ ಸತ್ಯವನ್ನು ಕಂಡುಕೊಂಡನೋ, ಅಥವಾ ಕಂಡುಕೊಳ್ಳುವನೋ ಅವನು ಧೀರ, ಬುದ್ಧಿವಂತ. ಆದರೆ ಅವನು ಸಾಹಸಿ, ಶೂರ, ಎಲ್ಲರಿಗಿಂತ ಹೆಚ್ಚಿನ ಸಾಹಸವನ್ನು ಮಾಡಿದವನು. ಸತ್ಯದ ಅನ್ವೇಷಣೆಗಾಗಿ ಅವನು ತನ್ನೆಲ್ಲವನ್ನೂ ತೊರೆದು ಸತತ ಚಿಂತನೆ, ತಪಸ್ಸು, ಧ್ಯಾನಗಳನ್ನು ಆಚರಿಸಿದ. ಐಹಿಕ ಜಗತ್ತಿನ ಯಾವ ಸುಖಭೋಗಗಳನ್ನಾಗಲಿ, ಕುಟುಂಬ–ಪದವಿ–ಕೀರ್ತಿಗಳನ್ನಾಗಲಿ ಅವನು ಬಯಸಲಿಲ್ಲ. ಹಾಗಾಗಿ ಅವನು ಶೂರ, ಸಾಹಸಿ. 'ಧೀರ' ಎಂಬ ಪದಕ್ಕೆ ಈ ಅರ್ಥವೂ ಬಂತು.

### ಅನಂತ – ಭಗವಂತನ ಸ್ವರೂಪ

ಉಪನಿಷತ್ತಿನಲ್ಲಿ ಭಗವಂತನು ಹೇಗಿದ್ದಾನೆ, ಏನಾಗಿದ್ದಾನೆ ಎಂಬುದನ್ನು ವಿವರಿಸುವಾಗ, 'ಅವನ ಸ್ವಭಾವವೇ ಅನಂತ' ಎನ್ನಲಾಗಿದೆ. ('**ಸತ್ಯಂ ಜ್ಞಾನಮನಂತಂ ಬ್ರಹ್ಮ**'– *ತೈ. ಉ.೨.೧*) ನೇರ ಅನುಭವವನ್ನು ಪಡೆದಲ್ಲದೆ ಈ ರೀತಿಯ ವಿವರಣೆ ಸಾಧ್ಯವಿಲ್ಲ. ಸಾಕ್ಷಾತ್ಕಾರದ ಅನುಭವದ ಫಲವಾಗಿ ಮೂಡಿ ಬಂದ ಉದ್ಗಾರವಿದು. ಈ ಮಾತಿನ ಅನನ್ಯ ಭಾವವನ್ನು ಅರಿಯಬೇಕಾದರೆ, ಈ ಮಂತ್ರಕ್ಕೆ ಶ್ರೀಶಂಕರರು ಬರೆದಿರುವ ಅಸಾಧಾರಣ ಭಾಷ್ಯವನ್ನು ಓದಬೇಕು. ಸುದೀರ್ಘವಾದ ಈ ಭಾಷ್ಯದಲ್ಲಿ ಭಗವಂತನು ಹೇಗೆ ಕಾಲದ ದೃಷ್ಟಿಯಿಂದಲೂ, ದೇಶದ ದೃಷ್ಟಿಯಿಂದಲೂ ವಸ್ತು ದೃಷ್ಟಿಯಿಂದಲೂ ಅನಂತವಾಗಿದ್ದಾನೆ ಎಂಬುದರ ಚರ್ಚೆಯಿದೆ. ಇದಲ್ಲದೆ, ಇನ್ನಿತರ ಉಪನಿಷತ್ತುಗಳಲ್ಲೂ ಆತ್ಮ–ಬ್ರಹ್ಮ ಈ ವಿಚಾರವನ್ನು ಕುರಿತ ಹಲವು ಭಾಗಗಳಲ್ಲಿ ಭಗವಂತನ ಅಸಾಧಾರಣ ಸ್ವಭಾವದ ವಿವಿಧ ವಿವರಣೆಗಳಿವೆ. ಈ ಕಾವ್ಯಾತ್ಮಕ ಭಾಗಗಳಲ್ಲಿ ವಿವರಣೆಗೆ ನಿಲುಕದ, ಮಾತು–ಮನಸ್ಸು–ಬುದ್ಧಿಗಳನ್ನು ಮೀರಿದ ಅಗೋಚರ ಸತ್ಯದ ಶಾಬ್ದಿಕ ಸೂಚನೆಯಷ್ಟೇ ಇವೆ. ಈ ಸೂಚನೆಗಳು ಮುಂದೆ ಶಾಸ್ತ್ರಜ್ಞರ, ತತ್ತ್ವಶಾಸ್ತ್ರಜ್ಞರ, ಮಹಾನ್ ಸಾಧಕರ ಹಲವು ಬಗೆಯ ಭಾಷ್ಯ–ವಿವರಣೆ–ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟವು. ಆದರೆ, ಕೇವಲ ಅನುಭವದಿಂದ ಮಾತ್ರವೇ ಈ ಸತ್ಯದ ನೈಜ ಸ್ವರೂಪವನ್ನು ಅರಿಯಬಹುದೇ ಹೊರತು, ತರ್ಕ–ವಿವರಣೆಯಿಂದಾಗಲೀ, ಚಿಂತನ–ಮಂಥನದಿಂದಾಗಲೀ ಅಲ್ಲ ಎಂದು ಉಪನಿಷತ್ತುಗಳು ತಿಳಿಸುತ್ತವೆ. ('**ನೈಷಾ ತರ್ಕೇಣ ಮತಿರಾಪನೇಯಾ**' – *ಕಠ, ೧.೨.೯*)

ವೇದ, ಉಪನಿಷತ್ತುಗಳ ತಾತ್ತ್ವಿಕ, ದಾರ್ಶನಿಕ ಅಂಶಗಳೇ ಪೌರಾಣಿಕ ದೇವದೇವತೆಗಳ ಸ್ವರೂಪವನ್ನು ರೂಪಿಸಿವೆ ಎನ್ನಬೇಕು. ಬ್ರಹ್ಮ, ವಿಷ್ಣು, ಶಿವ, ದುರ್ಗೆ, ಗಣೇಶ, ಸರಸ್ವತಿ ಮುಂತಾದ ದೇವತೆಗಳ ಕಥಾನಕಗಳು ಮಾನವನ ಅನುಭವಗಳ ಪರಿಧಿಯನ್ನು ಮೀರಿದ, ಅತಿಮಾನುಷ ಹಾಗೂ ಅತಿಭೌತಿಕ ಅದ್ಭುತ ಘಟನೆಗಳನ್ನು ಒಳಗೊಂಡ ದೈವೀ ಮಹಿಮೆ

ಗಳನ್ನು ವರ್ಣಿಸುತ್ತವೆ. ಅಸಾಧಾರಣ ರೂಪ, ಶಕ್ತಿ ಸಾಮರ್ಥ್ಯ, ಮಹತ್ಕಾರ್ಯ – ಇವು ದೇವದೇವಿಯರ ಮಹಿಮಾತಿಶಯವನ್ನು ವರ್ಣಿಸುತ್ತವೆ; ಇದರೊಂದಿಗೆ ಈ ದೇವದೇವತೆಗಳಲ್ಲಿ ಕರುಣೆ, ದಯೆ, ಕೃಪೆ, ಉದ್ಧಾರ ಮಾಡುವ ಕಾತರತೆ — ಇವನ್ನೆಲ್ಲ ಕಾಣುತ್ತೇವೆ. ಹೀಗೆ ಜನಸಾಮಾನ್ಯರೆಲ್ಲ ತಮ್ಮ ಜೀವನಾನುಭವಗಳು ತಂದೊಡ್ಡುವ ಸೀಮಿತತೆಗೆ ಪ್ರತಿಯಾಗಿ, ಅವನ್ನೆಲ್ಲ ಮೀರಿರುವ ಶಕ್ತಿಗಳ ಮೊರೆಹೊಗಲು ಒಂದು ಅನುವು ಮಾಡಿಕೊಟ್ಟಂತಾಯಿತು. ಇದರಿಂದ ತಾತ್ತ್ವಿಕ, ಆಧ್ಯಾತ್ಮಿಕ ಅನ್ವೇಷಣೆಗಳು ಅನಗತ್ಯವಾಗಿ, ಈಗಾಗಲೇ ಸಿದ್ಧವಾದ ಅನಂತ, ಅತೀತದ ಮೊರೆ ಹೊಗುವುದು ಮತ್ತು ಈ ಮೂಲಕ 'ಮೀರಿ ಹೋಗುವ' ಪ್ರವೃತ್ತಿಯನ್ನು ತಣಿಸುವ ಕಾರ್ಯ ನಡೆಯಿತು. ಆದರೆ ಆಧ್ಯಾತ್ಮಿಕ ಸಾಧಕರ, ಭಗವದ್ದರ್ಶನಕ್ಕಾಗಿ ಹಂಬಲಿಸುವವರ ಅಂತರಂಗದಲ್ಲಿ ಈ ಅನ್ವೇಷಣೆ, ಮೀರುವ ತುಡಿತ, ಸ್ವಾತಂತ್ರ್ಯದ (ಮುಕ್ತಿ ಅಥವಾ ಸಾಕ್ಷಾತ್ಕಾರದ ರೂಪದಲ್ಲಿ) ಹಂಬಲ ಒಂದು ಒಪ್ಪಿತವಾದ ವಿಧಾನವೇ ಆಯಿತು.

ಯಶೋದೆಗೆ, ಕೃಷ್ಣ ಬಾಯಲ್ಲಿ ಮಣ್ಣು ತಿಂದಿರಬೇಕು ಅನ್ನಿಸಿತು. 'ತೆರೆ ಬಾಯಿ, ಮಣ್ಣು ತಿಂದೆ ಅಲ್ಲವೆ?' ಎಂದು ಗದರಿದಳು. ಮಗು ಬಾಯಿ ತೆರೆಯಿತು. ಅದಲ್ಲಿ ಇಡೀ ಬ್ರಹ್ಮಾಂಡವೇ ಅಡಗಿದ್ದನ್ನು ಕಂಡು ಆಕೆ ಬೆಚ್ಚಿಬಿದ್ದಳು. ಸಮಸ್ತ ಬ್ರಹ್ಮಾಂಡವನ್ನೇ ತನ್ನಲ್ಲಿ ಅಡಗಿಸಿಕೊಂಡ ಪರಮಾತ್ಮನೇ ಇವನು – ಎಂದಾಕೆ ಅರಿತಳು. ಗೀತೆಯಲ್ಲಿ ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿದಾಗಲೂ ಅಷ್ಟೆ — ಸೀಮಿತ ನಾಮ, ರೂಪಗಳಾಚೆಗೆ ಅನಂತ ಅಸ್ತಿತ್ವವನ್ನು, ವಿರಾಡ್ರೂಪವನ್ನು ಕಂಡ ಅನುಭವವಿದೆ. ಕೇವಲ ಕಾಲ್ಪನಿಕ, ತಾತ್ತ್ವಿಕ ದೃಷ್ಟಿಯಿಂದ ಮಾತ್ರವಲ್ಲ; ಆಧ್ಯಾತ್ಮಿಕ ಅನುಭೂತಿಯೆಂದರೆ ಅನಂತದ ದರ್ಶನವೇ ಆಗಿದೆ ಎಂಬುದು ಇಲ್ಲಿ ತಿಳಿದು ಬರುತ್ತದೆ. ಜಟಾಜೂಟಧಾರಿಯಾದ, ಚಂದ್ರಶೇಖರನಾದ, ಉರಗಭೂಷಣನಾದ ಶಿವನು ತನ್ನ ಸಾಕಾರ ಮೂರ್ತಿಯ ರೂಪದಲ್ಲಿ ಭಕ್ತನ ಹೃದಯದಲ್ಲಿ ರಾರಾಜಿಸುತ್ತಾನೆ; ಅದೇ ಶಿವನು ಸಕಲ ಮಂಗಳಗಳ ಆಗರವಾಗಿ ಅನಂತ ನಿರಾಕಾರ ಶಕ್ತಿಯೂ ಆಗುತ್ತಾನೆ. ಅನಂತ ಹಿಮಾಲಯ ಶಿಖರಗಳಲ್ಲಿ ಅವನ ಧವಳಕೀರ್ತಿ ವಿಸ್ತರಿಸುತ್ತದೆ. ಸಾಧಕನು ಕಾಣಬಯಸುವುದು ಈ ಸಾಕಾರ, ನಿರಾಕಾರ ಎರಡೂ ಆಗಿರುವ ಪರಬ್ರಹ್ಮನ ವೈಭವವನ್ನು.

### 'ಎಲ್ಲ ಇಲ್ಲೇ ಇದೆ!'

ಮಾನವನ ಅತೀತದ ಅನ್ವೇಷಣೆ ಭೌತಿಕವಾಗಿರಲಿ, ತಾತ್ತ್ವಿಕವಾಗಿರಲಿ, ಆಧ್ಯಾತ್ಮಿಕವಾಗಿರಲಿ – ಅದು ಪ್ರಪಂಚವನ್ನು ದಾಟಿ ಹೋಗುವುದು ಎಂಬ ಕಲ್ಪನೆ ಹಳೆಯದು. ಭಗವಂತನನ್ನು ಅರಸುತ್ತ ಕಾಡು, ಮೇಡು, ನದಿ, ಪರ್ವತಗಳಲ್ಲಿ ಅಲೆದಾಡಿದ ಬಳಿಕ, ಒಂದೆಡೆ ಕುಳಿತು ತನ್ನ ಅಂತರಂಗಕ್ಕಿಳಿದ ಮಾನವನಿಗೆ ಅರಿವಾಗಿದ್ದಿಷ್ಟು: 'ಅವನಿಲ್ಲೇ ಇದ್ದಾನೆ; ನನ್ನೊಳಗೆಯೇ ಇದ್ದಾನೆ'. ಅವನಿಗಿನ್ನು 'ದಾಟಿ ಹೋಗುವ' ಆತುರವಿಲ್ಲ, ಎಲ್ಲೋ ಅಲೆಯುವ ಹುಮ್ಮಸ್ಸಿಲ್ಲ. ಆಳಕ್ಕೆ, ಇನ್ನೂ ಆಳಕ್ಕೆ ಇಳಿಯುವ ಮನಸ್ಸಿದೆ. ಈ ಹಿನ್ನಲೆಯಲ್ಲಿ ರೂಪುಗೊಂಡ ವಿಧಾನವೇ ಧ್ಯಾನ. ಒಂದೆಡೆ ಕುಳಿತು ಸಾಧನೆ ಮಾಡು – ಅಲ್ಲಿ ಅನಂತವೇ ಅಡಗಿದೆ – ಎಂಬ ಬೋಧನೆ ಇಲ್ಲಿನದು. ಒಂದು ಬಿಂದುವಿನಲ್ಲಿ ಅನಂತತೆ; ಒಂದು ಕ್ಷಣದಲ್ಲಿ ಅನಂತ, ನಿತ್ಯ, ಕಾಲಾತೀತ ಅನಂತತೆ! ಇದು ಮೊದಲಿಗೆ ಕಲ್ಪನೆ-ಭಾವನೆ; ಸಾಧನೆ ಮಡುಗಟ್ಟಿದಂತೆ ಅದೇ, ಅನುಭವ. ಹೀಗೆ ಮಾನವ ಮನಸ್ಸು ಭೌತಿಕ ವಲಯದಾಚೆಗೆ ಹೆಜ್ಜೆಯಿಡುತ್ತದೆ. ಮನಸ್ಸು-ಬುದ್ಧಿಗಳ ಯತ್ನಕ್ಕೆ ಸಿಲುಕದ ಅನಂತದಲ್ಲಿ ಈಜಾಡುತ್ತ ವಿಹರಿಸುತ್ತದೆ. ಅದು ಸತ್ಯದ ದಾರಿ, ಋತಪಥ. ಶ್ರೀರಾಮಕೃಷ್ಣರಿಗೆ ಮೊದಲ ಬಾರಿ ಕಾಳೀಮಾತೆಯ ದರ್ಶನವಾದಾಗ ಉಂಟಾದ ಅಸಾಧಾರಣ ಅನುಭವವನ್ನು ಸ್ವಾಮಿ ಶಾರದಾನಂದರು ಹೀಗೆ ವರ್ಣಿಸುತ್ತಾರೆ: ''ಮನೆ, ಬಾಗಿಲು, ಮಂದಿರ ಎಲ್ಲ ಮಾಯವಾದವು – ಎಲ್ಲೂ ಏನೂ ಕಾಣುತ್ತಿಲ್ಲ. ಕೇವಲ ಅಸೀಮ ಅನಂತ ಜ್ಯೋತಿಃ ಸಮುದ್ರವೊಂದೇ ಕಾಣುತ್ತಿದೆ. ಎಲ್ಲಿ ನೋಡಿದರೂ, ಎಷ್ಟೇ ದೂರ ಕಣ್ಣು ಹಾಯಿಸಿದರೂ ನಾಲ್ಕೂ ಕಡೆಯೂ ಅದರ ಉಜ್ಜ್ವಲ ಜ್ವಾಲಾಮಾಲೆಯು ಭೋರ್ಗರೆಯುತ್ತ ಎಲ್ಲವನ್ನೂ ನುಂಗಿಹಾಕುವಂತೆ ಮುನ್ನುಗ್ಗುತ್ತಿತ್ತು. ನೋಡುತ್ತಿದ್ದಂತೆಯೇ ಅದು ನನ್ನ ಮೇಲೆ ಎರಗಿ ನನ್ನನ್ನು ಎಲ್ಲಿಯೋ ಮುಳುಗಿಸಿಬಿಟ್ಟಿತು. ನಾನು ಏಳುತ್ತ ಮುಳುಗುತ್ತ ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟೆ.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೧, ಪು.೧೪೭–೪೮)* ಮಾನವನು ತನ್ನ ಎಲ್ಲೆಗಳನ್ನೆಲ್ಲ ಮೀರಿ, ಭಗವಂತನ ರಾಜ್ಯವನ್ನು ಪ್ರವೇಶಿಸಿದಾಗ ಅದೆಂಥ ಅಗಾಧ, ಅದ್ಭುತ ಅನುಭವ ಅವನಿಗಾಗುವುದು! ಪ್ರಪಂಚವೇ ಇಲ್ಲದಾಗುವ, ಎಲ್ಲವೂ ಅತೀತದಲ್ಲಿ ಲಯವಾಗುವ, ಅಂತಹ ಇಂದ್ರಿಯಾತೀತ ಅನುಭವವೇ ಇದರ ಅಭಿವ್ಯಕ್ತಿ. ಮಾನವನ 'ಮೀರಿ ಹೋಗುವ' ಪ್ರವೃತ್ತಿಯು ಶಾಂತವಾಗುವುದು ಇಲ್ಲಿ. ಕೊನೆಯಿಲ್ಲದ ಅನ್ವೇಷಣೆ ಅಂತ್ಯಗೊಳ್ಳುವುದು ಇಲ್ಲಿ. ಅಂತೆಯೇ ಜೀವಿಯು ತನ್ನ ಮೂಲನೆಲೆಯನ್ನು ಕಂಡುಕೊಂಡು ಚಿರ ವಿಶ್ರಾಂತಿಯನ್ನು ಹೊಂದುವುದೂ ಇಲ್ಲಿ. ❋

### ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೯ | ಸೋಮವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| ೧೧ | ಬುಧವಾರ | ಏಕಾದಶಿ |
| ೨೨ | ಭಾನುವಾರ | ಶ್ರೀಶಾರದಾದೇವಿ ಜಯಂತಿ |
| ೨೪ | ಮಂಗಳವಾರ | ಕ್ರಿಸ್‌ಮಸ್ ಈವ್ |
| ೨೬ | ಗುರುವಾರ | ಸ್ವಾಮಿ ಶಿವಾನಂದ ಜಯಂತಿ<br>ಏಕಾದಶಿ |